<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 22603-2022

ಸಿಡಬ್ಲೂ -4 ಪಿಡಬ್ಲೂ-3

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜನ್ |
| ತಂದೆಯ ಹೆಸರು | : | ಸಂಪತ್ತ |
| ವಯಸ್ಸು | : | 55 ವರ್ಷ |
| ಕೆಲಸ | : | ಚಾಲಕ |
| ವಾಸ | : | ದೊಡ್ಡಬಳ್ಳಾಪುರ |

<u>ಸಾಕ್ಷಿಯನ್ನು ದಿನಾಂಕಃ 03-01-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನನಗೆ ಚಾಸಾ 1 ರವರು ನನ್ನ ಮಗಳು, ಚಾಸಾ 5 ರವರು ನನ್ನ ಹೆಂಡತಿ, ಚಾಸಾ 2 ಮತ್ತು 3 ರವರು ನಮ್ಮ ಪಕ್ಕದ ಮನೆಯವರು. ಚಾಸಾ 6 ರಿಂದ 8 ರವರು ನನ್ನ ಸಂಬಂಧಿಕರು. 1 ನೇ ಆರೋಪಿ ನನ್ನ ಅಳಿಯ, 2 ನೇ ಆರೋಪಿ 1 ನೇ ಆರೋಪಿ ತಂದೆ. 3 ನೇ ಆರೋಪಿ 1 ನೇ ಆರೋಪಿಯ ತಾಯಿ, ಈಗ ಮೃತಪಟ್ಟಿರುತ್ತಾರೆ. 4 ನೇ ಆರೋಪಿ1 ನೇ ಆರೋಪಿಯ ಅಕ್ಕ. 5 ನೇ ಆರೋಪಿ ಆಕೆಯ ಗಂಡ ಈಗ ಮೃತಪಟ್ಟಿರುತ್ತಾರೆ. 6 ನೇ ಆರೋಪಿ 1 ನೇ ಆರೋಪಿಯ ತಂಗಿ, 7 ನೇ ಆರೋಪಿ 6 ನೇ ಆರೋಪಿಯ ಗಂಡ.

ನನಗೆ 3 ಜನ ಮಕ್ಕಳಿರುತ್ತಾರೆ. ಇಬ್ಬರು ಹೆಣ್ಣು ಮಕ್ಕಳು ಒಬ್ಬ ಮಗ ಇರುತ್ತಾನೆ. ನನ್ನ ಮೊದಲನೇಯ ಮಗಳು ಭವ್ಯ ಆಗಿರುತ್ತಾರೆ. ಚಾಸಾ 1 ರವರ ಮದುವೆಯು 1 ನೇ ಆರೋಪಿಯ ಜೊತೆಯಲ್ಲಿ ನಿಶ್ಚಿಯವಾಗಿದ್ದು ದೊಡ್ಡಬಳ್ಳಾಪುರದ ಮಾಂಗಲ್ಯ ಕಲ್ಯಾಣ ಮಂಟಪದಲ್ಲಿ ದಿ. 12-12-2018 ರಂದು ಮದುವೆಯಾಗಿದ್ದು, ಮದುವೆಯ ದಿನ ಕಾಲುಉಂಗುರದ ವಿಚಾರವಾಗಿ ಜಗಳವಾಗಿರುತ್ತದೆ. ಆ ಸಮಯದಲ್ಲಿ ಮದುವೆಗೆ ತೊಂದರೆ ಆಗಬಾರದು ಎಂದು ನಾವೇ ಹೊಂದಾಣಿಕೆ ಮಾಡಿಕೊಂಡು ಮದುವೆ ಮಾಡಿಕೊಟ್ಟಿರುತ್ತೇವೆ.

ಮದುವೆಯ ಸಮಯದಲ್ಲಿ ಅವರು ಕೇಳಿದಂತೆ ಹುಡುಗನಿಗೆ 125 ಗ್ರಾಂ ಚಿನ್ನ, ಹುಡುಗಿಗೆ 160 ಗ್ರಾಂ ಚಿನ್ನ ನೀಡಿ ಅದ್ದೂರಿಯಾಗಿ ಮದುವೆ ಮಾಡಿಕೊಟ್ಟಿರುತ್ತೇವೆ.

ಮದುವೆಯ ನಂತರ ನನ್ನ ಮಗಳನ್ನು ಆಕೆಯ ಗಂಡನ ಮನೆಗೆ ಕಳುಹಿಸಿಕೊಟ್ಟಿದ್ದು, ನನ್ನ ಮಗಳನ್ನು ಆರೋಪಿಯ ಮನೆಗೆ ಕಳುಹಿಸಿದ ದಿನ ಮದುವೆಯಲ್ಲಿ ಬಂದ ಉಡುಗೊರೆಗಳನ್ನು ತಮ್ಮ ಮನೆಗೆ ತರಬೇಕೇಂದು ಹೇಳಿ ಗಲಾಟೆ ಮಾಡಿರುವುದಾಗಿ ನನ್ನ ಮಗಳು ನನಗೆ ಫೋನ್ ಮಾಡಿ ತಿಳಿಸಿರುತ್ತಾಳೆ.

ಆ ಸಮಯದಲ್ಲಿ ನಾನು ಆಕೆಗೆ ಹೊಂದಾಣಿಕೆ ಮಾಡಿಕೊಂಡು ಹೋಗುವಂತೆ ತಿಳಿಸಿರುತ್ತೇನೆ. ನಂತರ ವರೋಪಚಾರಕ್ಕಾಗಿ ಚಾಸಾ 1 ಮತ್ತು 1 ನೇ ಆರೋಪಿಯನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತೇವೆ. ಆ ಸಮಯದಲ್ಲಿ 4 ಮತ್ತು 6 ನೇ ಆರೋಪಿತರು ಮದುವೆಯ ಸಮಯದಲ್ಲಿ ನೀಡಲಾಗಿದ್ದ ಚೈನ್ ಚಿಕ್ಕದಾಗಿದ್ದು ಸರಿಯಾಗಿ ಮಾಡಿಸಿಕೊಂಡು ಬರುವಂತೆ ಹೇಳಿ ಕಳುಹಿಸಿರುತ್ತಾರೆ. ನಂತರ ನಾವು ಚೈನ್ ನ್ನು ಬದಲಾವಣೆ ಮಾಡಿ ಬೆಳ್ಳಿಯ ಸಾಮಾನುಗಳೊಂದಿಗೆ ಚಾಸಾ 1 ರವರನ್ನು ಗಂಡನ ಮನೆಗೆ ಕಳುಹಿಸಿರುತ್ತೇವೆ.

ನಂತರ ಆರೋಪಿತರ ಮನೆಯವರು ಚಾಸಾ 1 ರವರಿಗೆ ಸರಿಯಾಗಿ ಅಡುಗೆ ಮದಲು ಬರುವುದಿಲ್ಲ ಎಂಬ ವಿಚಾರವಾಗಿ ಗಲಾಟೆ ಮಾಡಿರುವುದಾಗಿ ನನ್ನ ಮಗಳು ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ. ಚಾಸಾ 1 ರವರು 1 ನೇ ಆರೋಪಿಯು ಕೆಲಸಕ್ಕೆ ಹೋಗುತ್ತಿಲ್ಲ ಎಂಬ ವಿಚಾರವನ್ನು ಕೇಳಿದಾಗ ಆತನು ನಾನು ಎಲ್ಲಿಗೆ ಹೋಗಿ ಬಂದರೇ ನೀನಗೇನು ? ನನ್ನ ಅಕ್ಕ-ತಂಗಿಯರು ಹೇಳಿದಂತೆ ಕೇಳಿಕೊಂಡು ಇರು ತಿಳಿಸಿರುತ್ತಾನೆ.

ಚಾಸಾ 4 ಮತ್ತು 5 ರವರು ತಮ್ಮ ಇಬ್ಬರು ಮಕ್ಕಳೊಂದಿಗೆ 1 ನೇ ಆರೋಪಿಯ ಮನೆಯಲ್ಲೇ ವಾಸವಾಗಿದ್ದು, ಆ ವಿಚಾರವನ್ನು ಕೇಳಿದಾಗ ಅವರು ನಮ್ಮದೊಂದಿಗೆ ಇರುತ್ತಾರೆ ಅವರು ಹೇಳಿದಂತೆ ಕೇಳಿಕೊಂಡು ಹೋಗುವಂತೆ ತಿಳಿಸಿರುವುದಾಗಿ ನನ್ನ ಮಗಳು ನನಗೆ ಫೋನ್ ಮೂಲಕ ತಿಳಿಸಿರುತ್ತಾರೆ. ಚಾಸಾ 1 ಮತ್ತು 3 ನೇ ಆರೋಪಿ ಇಬ್ಬರೆ ಮನೆಯಲ್ಲಿ ಇದ್ದಾಗ 3 ನೇ ಆರೋಪಿಯು ಚಾಸಾ 1 ರವರಿಗೆ 4 ನೇ ಆರೋಪಿ ಹೇಳಿದಂತೆ ಕೇಳಿಕೊಂಡು ಇರುವಂತೆ ತಿಳಿಸಿರುತ್ತಾರೆ.

ನಂತರ ನಾನು ಮತ್ತು ಚಾಸಾ 5 ರವರು ಆರೋಪಿತರ ಮನೆಗೆ ಬಂದು ಚಾಸಾ 1 ರವರನ್ನು ನೋಡಿದಾಗ ಆಕೆಯ ತಲೆಗೆ ರಕ್ತಗಾಯವಾಗಿದ್ದು ಆ ಬಗ್ಗೆ ನಾನು 1 ನೇ

ಆರೋಪಿಯನ್ನು ಕೇಳಿದಾಗ 1-2 ದಿನಗಳ ಕಾಲ ಚಾಸಾ 1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗುವಂತೆ ನಂತರ ತಾನು ಬಂದು ಕರೆದುಕೊಂಡು ಬರುವುದಾಗಿ ತಿಳಿಸಿರುತ್ತಾರೆ. ನನ್ನ ಮಗಳನ್ನು ನಮ್ಮ ಮನೆಗೆ ಕರೆದುಕೊಂಡು ಹೋದ ನಂತರ ಒಂದು ವಾರ ಕಳೆದರೂ 1 ನೇ ಆರೋಪಿಯು ನಮ್ಮ ಮನೆಗೆ ಬಂದಿರುವುದಿಲ್ಲ. ಆ ಸಮಯದಲ್ಲಿ ಚಾಸಾ 1 ರವರು ಗರ್ಬೀಣಿ ಎಂದು ತಿಳಿದು ಬಂದಿರುತ್ತದೆ. ಆ ಸಮಯದಲ್ಲಿ ನಾವು ಮತ್ತು ನಮ್ಮ ಪಕ್ಕದ ಮನೆಯವರು ಚಾಸಾ 1 ರವರನ್ನು ಆಕೆಯ ಗಂಡನ ಮನೆಗೆ ಬಿಟ್ಟು ಬರಲು ಆರೋಪಿತರ ಮನೆಗೆ ಹೋದಾಗ ಆರೋಪಿತರು ನಮ್ಮನ್ನು ತಮ್ಮ ಮನೆಗೆ ಏಕೆ ಬಂದಿದ್ದೀರಾ ಚಾಸಾ 1 ರವರು ಅವರ ಮನೆಯ ಸೊಸೆಯಲ್ಲ ನಮಗೂ ನಿಮಗೂ ಸಂಬಂಧ ಇರುವುದಿಲ್ಲ ಎಂದು ಹೇಳಿ ನಮ್ಮನ್ನು ಮನೆಯ ಒಳಗೆ ಬಿಡದೇ ಮನೆಯ ಹೊರಗೆ ನಿಲ್ಲಿಸಿರುತ್ತಾರೆ.

ಆ ಸಮಯದಲ್ಲಿ ಚಾಸಾ 1 ರವರು ಗರ್ಬಿಣಿಯಾಗಿರುವ ವಿಚಾರ ಆರೋಪಿತರಿಗೆ ತಿಳಿಸಿದ್ದು ಆಗ 1 ನೇ ಆರೋಪಿಯು ತಾನು ಚಾಸಾ 1 ರವರನ್ನು ಮುಟ್ಟಿಯೇ ಇಲ್ಲಾ ಮತ್ತು ನನಗೂ ಮತ್ತು ಚಾಸಾ 1 ರವರಿಗೂ ಯಾವುದೇ ಸಂಬಂಧ ಇಲ್ಲಾ ಎಂದು ಹೇಳಿ ನಮ್ಮನ್ನು ಮನೆಗೆ ಬಿಟ್ಟುಕೊಳ್ಳದೇ ಕಳುಹಿಸಿರುತ್ತಾರೆ. ಹಾಗಾಗಿ ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ನೀಡಿದ ಕಾರಣ ನಾವು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**Inspite of direction accused have not called their advocate hence, cross taken accuses nil**

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ